ಸಾರ್ವಜನಿಕ ಗ್ರಂಥಾಲಯದ ವಿಶೇಷ ತನಿಖಾ ವರದಿ

1477(2024) ಶ್ರೀ ಗುರುಸ್ವಾಮಿ ಎ.ಎಸ್. (ಚಾಮುಂಡೇಶ್ವರಿ): ಮಾನ್ಯ ವಯಸ್ಕರ ಶಿಕ್ಷಣ, ಗ್ರಂಥಾಲಯಗಳು ಮತ್ತು ಮುದ್ರಣ ಹಾಗೂ ಲೇಖನ ಸಾಮಗ್ರಿಗಳ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. 2-3 ವರ್ಷಗಳ ಹಿಂದೆ ಸಾರ್ವಜನಿಕ ಗ್ರಂಥಾಲಯ ಇಲಾಖೆ ನಿರ್ದೇಶಕರ ಕಛೇರಿಯ ತನಿಖೆ ನಡೆಸಿ ವಿಶೇಷ ತನಿಖಾ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಲಾಗಿದೆಯೇ;

ಆ. ಹಾಗಿದ್ದಲ್ಲಿ, ಸದರಿ ವಿಶೇಷ ತನಿಖಾ ವರದಿಯಲ್ಲಿ ಸಾರ್ವಜನಿಕ ಗ್ರಂಥಾಲಯದ ನಿರ್ದೇಶಕರ ವಿರುದ್ಧ ಗಂಭೀರ ಆರೋಪಗಳನ್ನು ಮಾಡಿರುವುದು ನಿಜವೇ;

ಇ. ಹಾಗಿದ್ದಲ್ಲಿ, ಸದರಿ ತನಿಖಾ ವರದಿಯಲ್ಲಿನ ಗಂಭೀರ ಆರೋಪಗಳು ಯಾವುವು ಹಾಗೂ ತನಿಖಾ ವರದಿಗಾರರು ಸರ್ಕಾರಕ್ಕೆ ಮಾಡಿದ ಶಿಫಾರಸ್ಸುಗಳು ಯಾವುವು;

ಈ. ವಿಶೇಷ ತನಿಖಾ ವರದಿಯಲ್ಲಿನ ಶಿಫಾರಸ್ಸಿಗೆ ಅನುಗುಣವಾಗಿ ಗ್ರಂಥಾಲಯ ನಿರ್ದೇಶಕರ ವಿರುದ್ಧ ಸರ್ಕಾರ ತೆಗೆದುಕೊಂಡ ಕ್ರಮಗಳೇನು;

ಉ. ಒಂದು ವೇಳೆ ಸರ್ಕಾರ ಈವರೆವಿಗೂ ಯಾವುದೇ ಕ್ರಮ ತೆಗೆದುಕೊಳ್ಳದಿದ್ದಲ್ಲಿ ಈಗಲಾದರೂ ಸದರಿ ನಿರ್ದೇಶಕರ ವಿರುದ್ಧ ಸೂಕ್ತ ಕ್ರಮ ತೆಗೆದುಕೊಳ್ಳಲಾಗುವುದೇ?

ಶ್ರೀ ಬಾಬುರಾವ್ ಚಿವ್ವಾಣ (ವಯಸ್ಕರ ಶಿಕ್ಷಣ, ಗ್ರಂಥಾಲಯಗಳು ಮತ್ತು ಮುದ್ರಣ ಹಾಗೂ ಲೇಖನ ಸಾಮಗ್ರಿಗಳ ರಾಜ್ಯ ಸಚಿವರು)

ಅ. ಹೌದು

ಆ. ಮತ್ತು ಇ

ಈ ವಿಶೇಷ ತನಿಖಾ ವರದಿಯಲ್ಲಿನ ಆರೋಪಗಳ ಬಗ್ಗೆ ಅಧಿಕಾರಿಗಳು ಹಾಗೂ ಸಿಬ್ಬಂದಿ ವರ್ಗದವರನ್ನು ಗುರುತಿಸಿ, ಆರೋಪ ಪಟ್ಟಿಗಳನ್ನು ನೀಡಲು ಸರ್ಕಾರವು ಈಗಾಗಲೇ ನಿವೃತ್ತ ನ್ಯಾಯಾಧೀಶರೊಬ್ಬರನ್ನು ನೇಮಿಸಿದೆ. ಅವರಿಂದ ಆರೋಪ ಹಾಗೂ ಆರೋಪ ಪಟ್ಟಿಯನ್ನು ಕಾಯಲಾಗುತ್ತಿದೆ.

ಈ ಮತ್ತು ಉ

ಸದರಿ ನಿವೃತ್ತ ನ್ಯಾಯಾಧೀಶರಿಂದ ಆರೋಪಗಳ ಬಗ್ಗೆ ದಾಖಲಾತಿಗಳು ಬಂದ ನಂತರ ನಿಯಮಗಳನ್ವಯ ಸಂಬಂಧಪಟ್ಟವರ ವಿರುದ್ಧ ಶಿಸ್ತಿನ ಕ್ರಮ ಜರುಗಿಸುವ ಬಗ್ಗೆ ಸಂಬಂಧಿಸಿದ, ಶಿಸ್ತಿನ ಪ್ರಾಧಿಕಾರ ತೆಗೆದುಕೊಳ್ಳುತ್ತದೆ.

ಬೆಂಗಳೂರು ನಗರದ ಸಾರ್ವಜನಿಕರಿಂದ ವಸೂಲು ಮಾಡಲಾದ ಗ್ರಂಥಾಲಯ ಕರ

1478(2025) ಶ್ರೀ ಗುರುಸ್ವಾಮಿ ಎ.ಎಸ್. (ಚಾಮುಂಡೇಶ್ವರಿ): ಮಾನ್ಯ ವಯಸ್ಕರ ಶಿಕ್ಷಣ, ಗ್ರಂಥಾಲಯಗಳು ಮತ್ತು ಮುದ್ರಣ ಹಾಗೂ ಲೇಖನ ಸಾಮಗ್ರಿಗಳ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?